ಮೂಲೂರು ಟೌನ್ ಬಹಳ ಮುಖ್ಯವಾದ ಸ್ಥಳ. ಆಲ್ಲಿ ಪ್ರಥಮ ದರ್ಜೆ ಕಾಲೇಜೂ ಕೂಡ ಇದೆ. ಆದ್ದರಿಂದ ಈ ಸ್ಟೇಡಿಯಂನ್ನು ಮುಂದಿನ ಆಯವ್ಯಯದಲ್ಲಿ ಸೇರಿಸಿ ಕಾರ್ಯಗತ ಮಾಡಿಸಿಕೊಡ ಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ ಆತ ನಾನು ಹೇಳಿದರೆ ನೀವು ಪ್ರಾರ್ಥಿಸಿಕೊಳ್ಳುತ್ತೇನೆ ಅಂದರೆ ಹೇಗೆ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ಅನೇಕ ಜಿಲ್ಲಾ ಮಟ್ಟದ ಸ್ಟೇಡಿಯಂ ಕೆಲಸಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಸುಮಾರು ೧೦-೧೫ ವರ್ಷಗಳಾದರೂ ಇನ್ನೂ ಅವುಗಳ ಕೆಲಸ ಪೂರ್ತಿ ಆಗಿಲ್ಲ. ಇದಕ್ಕೆ ಕಾರಣ ಏನೆಂದರೆ, ನಾವು ಸಾರ್ವಜನಿಕರಿಂದ ಪಂತಿಗೆಯನ್ನು ಎತ್ತಿ ಕೊಡುತ್ತೇವೆ. ಅದಕ್ಕೆ ಸರ್ಕಾರದವರೂ ಸ್ವಲ್ಪ ಹಣವನ್ನು ಹಾಕಿ ನಮಗೆ ಸ್ಟೇಡಿಯಂ ಕೆಲಸವನ್ನು ಪೂರ್ತಿ ಮಾಡಿಸಿ ಕೊಡಿ ಎಂದು ಕೇಳಿಕೊಳ್ಳುತ್ತಾರೆ. ಅವರ ಕೇಳಿಕೆಯ ಮೇರೆಗೆ ನಾವು ಕೆಲಸದ ಪ್ರಾರಂಭ ಮಾಡಿದರೆ ಅವರು ತಮ್ಮ ಪಂತಿಗೆಯನ್ನು ಕೊಡುವುದೇ ಇಲ್ಲ. ಕೊನೆಗೆ ಸರ್ಕಾರದವರೇ ಎಲ್ಲಾ ಹಣವನ್ನೂ ಹಾಕಿ ಪೂರೈಸಿ ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಈಗಾಗಲೇ ಸಾಗರ, ಸಿರ್ಸಿ, ಹೊಸಕೋಟೆ, ದಾವಣಗೆರೆ, ಚಿಕ್ಕಬಳ್ಳಾಪುರ ಇತ್ಯಾದಿ ಕಡೆಗಳಲ್ಲಿ ಈ ಸ್ಟೇಡಿಯಂ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸಾರ್ವಜನಿಕರು ಸರ್ಕಾರದವರನ್ನೇ ಕೇಳುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಕೇಳುವಂತೆ ಮುಂದಿನ ಆಯವ್ಯಯದಲ್ಲಿ ಈ ಕೆಲಸವನ್ನು ಸೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಈಗಾಗಲೇ ಆಯವ್ಯಯವನ್ನು ಮಂಡಿಸಿದ್ದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡಾಂಗಣಗಳನ್ನು ಮಾಡಬೇಕೆಂಬ ಯೋಜನೆ ಸರ್ಕಾರಕ್ಕಿದೆ. ಅದೇರೀತಿ ತಾಲ್ಲೂಕು ಮತ್ತು ಮಂಡಲ ಮಟ್ಟದಲ್ಲಿ ಆಯಾಯ ಸ್ಥಳಗಳಿಗನುಗುಣವಾದ ಸಣ್ಣಸಣ್ಣ ಸ್ಟೇಡಿಯಂಗಳಿಗೆ ಸೂಕ್ತವಾದ ಸ್ಥಳಗಳನ್ನು ಗುರುತಿಸುವಂತೆ ಜಿಲ್ಲಾ ಪರಿಷತ್ತುಗಳಿಗೆ ನಾವು ತಿಳಿಸಿದ್ದೇವೆ. ಸಾರ್ವಜನಿಕರಿಂದ ವಂತಿಗೆ ಎಲ್ಲೆಲ್ಲಿ ಬರುತ್ತದೆ ಅದನ್ನು ಕ್ರೋಢೀಕರಿಸಿಕೊಂಡು ಸರ್ಕಾರದ ವತಿಯಿಂದ ನೀಡಬೇಕಾದ ಹಣವನ್ನೂ ಹಾಕಿ ಆ ಸ್ಟೇಡಿಯಂಗಳನ್ನು ಮಾಡಿಸಿಕೊಡುತ್ತೇವೆ. ಇನ್ನು ಮೂಲೂರು ಸ್ಟೇಡಿಯಂ ವಿಚಾರವನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಇದನ್ನು ಸಾಧ್ಯವಾದರೆ ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಕಳಸಾ–ಹೊರನಾಡು ರಸ್ತೆ ಹಾಗೂ ಸೇತುವೆ

೧೫೦. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ಮೂಡಿಗೆರೆ ತಾಲ್ಲೂಕಿನ ಕಳಸಾ–ಹೊರನಾಡು ರಸ್ತೆ (ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹೋಗುವ) ಹಾಗು ಸೇತುವೆಯ ಅವಶ್ಯಕತೆಯ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಆ) ಬಂದಿದೆ.

ಆ) ಸೇತುವೆಯ ನಿವೇಶನವು ಉದ್ದೇಶಿತ ಭದ್ರಾ ಮೇಲ್ದಂಡೆ ಯೋಜನೆಯ ಆಣೆಕಟ್ಟಿನ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಮೇಲ್ಕಟ್ಟದ ಸೇತುವೆಯ ಬದಲಾಗಿ ಒಂದು ಮುಳುಗಡೆ ಸೇತುವೆ ನಿರ್ಮಾಣ ಮಾಡಲು ಪರಿಶೀಲನೆ ನಡೆಸಲಾಗಿದೆ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ ಈ ಪ್ರದೇಶದ ನೂರಾರು ವರ್ಷಗಳ ಬೇಡಿಕೆ ಇದು ಆಗಿದೆ ಎಲ್ಲಾ ಮಂತ್ರಿಗಳಿಗೂ ? ಇಲಾಖೆಯಲ್ಲಿನ ಎಲ್ಲಾ ಚೀಫ್ ಇಂಜಿನೀಯರುಗಳು ಅಲ್ಲಿಗೆ ಬಂದಿದ್ದರೆ ವರಿಗೆ ಬೇಡಿಕೆಯನ್ನು ಕೊಟ್ಟಿದ್ದರೂ ಇದುವರೆಗೆ ಈ ಬೇಡಿಕೆಯು ಈಡೇರಲಿಲ್ಲ ಈಗ ನನಗೆ ಜನಗಳು ಏನು ಹೇಳುತ್ತಿದ್ದಾರೆಂದರೆ ಎರಡನೆಯ ಸಾರಿಗೆ ನಿಮ್ಮನ್ನು ಆಯ್ಕೆಮಾಡುತ್ತಿದ್ದೇವೆ ಈ ಕೆಲಸ ಹಾಗೆಯೇ ಉಳಿದಿದೆ. ನೀವು ಈ ರಸ್ತೆ ಮತ್ತು ಸೇತುವೆಯ ಕೆಲಸವನ್ನು ಮಾಡಿಸದಿದ್ದರೆ ನಮ್ಮ ಕ್ಷೇತ್ರಕ್ಕೆ ಬರಬಾರದೆಂದು ಹೇಳುತ್ತಿದ್ದಾರೆ ಇದನ್ನು ಪಿ.ಡಬ್ಲ್ಯು.ಡಿ ಇಲಾಖೆಯವರು ತೆಗೆದುಕೊಂಡು ಇದಕ್ಕಾಗಿ ೨೪ ಲಕ್ಷ ರೂಪಾಯಿಗಳನ್ನು ಮಂಜೂರಾತಿಯನ್ನೂ ಸಹ ಮಾಡಿದಾರೆ. ಮಾನ್ಯ ಡಿ.ಬಿ. ಚಂದ್ರೇಗೌಡರು ನೀರಾವರಿ ಮಂತ್ರಿಗಳಾಗಿದ್ದಾಗ ಫೌಂಡೇಷನ್ ಸ್ಟೋನ್ ಸಹ ಹಾಕಿದ್ದರು. ಅಷ್ಟರಲ್ಲಿ ನ್ಯಾಷನಲ್ ಹೈವೆರವರು ಭದ್ರಾ ಮೇಲ್ದಂಡೆಯಾಗುತ್ತಿದೆ ಎಂದು ಸ್ಟೇ ಕೊಟ್ಟರು ಆದರೆ ನಮ್ಮ ಜನರು

ಭದ್ರಾವೇಲ್ಡಂಡೆಯಾಗಬಾರದೆಂದು ಅಲ್ಲಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತದೆಂದು ಹೇಳುತ್ತಿದ್ದಾರೆ ಒಂದುವೇಳೆ ಭದ್ರಾವೇಲ್ಡಂಡೆ ಆದರೂ ಸಹ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುವಾಗ ಇದು ಒಂದು ಸೇತುವೆ ಮುಳುಗಡೆಯಾದರೆ ಸರ್ಕಾರಕ್ಕೆ ಆಂಥದ್ದೇನು ಲಾಸ್ ಆಗುವುದಿಲ್ಲ ವೆಂದು ನನಗನ್ನಿಸುತ್ತದೆ. ಆದರೆ ಇದರಿಂದಾಗಿ ಸಾವಿರಾರು ಜನ ಕಷ್ಟ ಅನುಭವಿಸುತ್ತಿದ್ದಾರೆ ಆದ್ದರಿಂದ ನಾನು ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ಸೆಂಟ್ರಲ್ ರಿಲೀಫ್ ಫಂಡ್‌ನಿಂದ ಳಿಗೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಇದನ್ನು ಉಪಯೋಗಿಸಿಕೊಂಡು ಆದಷ್ಟು ಜಾಗ್ರತೆ ರಸ್ತೆಕಾವಲುಗಾರಿಕೆ ಕೆಲಸವನ್ನು ಪ್ರಾರಂಭ ಮಾಡುತ್ತೀರಾ? ಅಥವಾ ಭದ್ರಾ ವೇಲ್ಡಂಡೆಗೋಸ್ಕರ ನಮ್ಮ ಜನರಿಗೆ ತೊಂದರೆ ಮಾಡುತ್ತೀರಾ ಎನ್ನುವುದು ನನ್ನ ಪ್ರಶ್ನೆಯಾಗಿದೆ.....

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ ಇದು ಒಹಳ ದಿವಸಗಳಿಂದ ನೆನೆ ಗುದಿಗೆಯಲ್ಲಿ ಬಿದ್ದಿರುವುದು ನಿಜ ಅಂದಿನ ಸನ್ಮಾನ್ಯ ಲೋಕೋಪಯೋಗಿ ಮಂತ್ರಿಗಳಾಗಿದ್ದ ಚಂದ್ರೇಗೌಡರು ಶಿಲಾನ್ಯಾಸವನ್ನು ಮಾಡಿರುವುದೂ ನಿಜ ಅದಕ್ಕೆ ಕೇಂದ್ರ ಸರ್ಕಾರದಿಂದ ಸಿ.ಆರ್.ಎಫ್. ಫಂಡ್‌ನಿಂದ ೨೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದೂ ನಿಜ. ಇದಕ್ಕೆ ೧೯೮೦ನೇ ಇಸವಿಯಲ್ಲಿ ಟೆಂಡರ್ ಕರೆಯಲಾಗಿತ್ತು. ಈಗ ಈ ಸೇತುವೆಯನ್ನು ೧೯೯೨-೯೩ನೇ ಆಯವ್ಯಯ ಪತ್ರದಲ್ಲಿ ಸೇರಿಸಿಯೂ ಇದ್ದಾರೆ. ಆದರೆ ಭದ್ರಾ ವೇಲ್ಡಂಡೆ ನಾಲೆ ಮಾಡುವಾಗ ಇದು ಮುಳುಗಡೆಯಾಗುತ್ತದೆ, ಸೇತುವೆ ಉಪಯೋಗಕ್ಕೆ ಬರುವುದಿಲ್ಲ ಎನ್ನುವ ಕಾರಣದಿಂದ ಅದನ್ನು ರಿಕ್ಯಾಸ್ಟ್ ಮಾಡುತ್ತಿದ್ದಾರೆ ಹೈಲೆವಲ್ ಕಾಸವೇ ಮಾಡಬೇಕೆ ಆಥವಾ ಲೋ ಲೆವಲ್ ಕಾಸವೇ ಮಾಡಬೇಕೆ ಎನ್ನುವ ವಿಷಯ ಮುಂದೆ ಬಂದಿದ್ದು ಈಗ ಲೋಲೆವಲ್ ಕಾಸವೇ ಮಾಡಬೇಕು ಇದು ಸೂಕ್ತ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ ಆದ್ದರಿಂದ ಅವರು ಮಾಡಿರತಕ್ಕಂಥ ಶಿಲಾನ್ಯಾಸ ಕಾರ್ಯಕ್ಕೆಗೂಡಿ ಶೀಘ್ರವೇ ಆರಂಭವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಸಚಿವರು ನನ್ನ ಹೆಸರನ್ನು ಹೇಳಿದ್ದರಿಂದ ಒಂದು ನಿಮಿಷ ಅವಕಾಶವನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಪ್ರಾರ್ಥನೆ ಇದು ಕನ್ನಡದಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ''ಹುಚ್ಚು ಬಿಡದ ಹೊರತು ಮದುವೆಯಾಗುವುದಿಲ್ಲ, ಮದುವೆಯಾಗದ ಹೊರತು ಹುಚ್ಚು ಬಿಡುವುದಿಲ್ಲ.'' ಎಂದು ೧೦-೧೨ ವರ್ಷಗಳ ಕೆಳಗೆ ನಾನು ನೀರಾವರಿ ಮಂತ್ರಿಯಾಗಿದ್ದಾಗ ಆದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ದೊರಕಿದ್ದು ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಿ ನಾನು ರೆಸ್ಪಾನ್ಸಿಬಲ್ ಮಂತ್ರಿಯಾಗಿ ಅದಕ್ಕೆ ಪೌಂಡೇಷನ್ ಹಾಕಿದ್ದೇನೆ ಇದಕ್ಕೆ ೨೮ ಲಕ್ಷ ರೂಪಾಯಿಗಳು ಬಿಡುಗಡೆಯು ಆಗಿದೆ ಪುನಃ ಯಾವುದೋ ಕಾಲಕ್ಕೆ ಬರುತ್ತದೆ ಎಂದರೆ ಏನು ಅರ್ಥ ಅಪ್ಪರ್ ಭದ್ರಾ ೧೨ ವರ್ಷಗಳ ಕಾಲದ್ದು ಏಳನೇ ಪಂಚವಾರ್ಷಿಕ ಯೋಜನೆ ಕ್ಲೀಯರ್ ಆಗಿದ್ದರೂ ಅಪ್ಪರ್‌ಭದ್ರಾ ಆಗಿಲ್ಲ ಎಂಟನೇ ಪಂಚವಾರ್ಷಿಕ ಯೋಜನೆಯನ್ನು ನೋಡಬೇಕಾಗಿದೆ ಒಂದು ಪ್ರಾಜೆಕ್ಟ್ ಆಗಬೇಕಾದರೆ ೪೦-೫೦ ವರ್ಷಗಳಿಗೆ ಕಡಿಮೆಯಾಗುವುದಿಲ್ಲ. ಈ ಒಂದು ಸೇತುವೆಯ ಉಪಯುಕ್ತತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು ಅಲ್ಲಿ ಒಕ್ಕಲುತನ ಮಾಡತಕ್ಕಂಥವರಿಗೆ ಇದು ಬಹಳ ಉಪಯುಕ್ತವಾದುದಾಗಿರುತ್ತದೆ. ನೂರಾರು ಜನ ಪ್ರತಿನಿತ್ಯ ಹೋಗುತ್ತಿರುತ್ತಾರೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡ ಸೇತುವೆಯ ಕಾರ್ಯವನ್ನು ಮುಗಿಸಬೇಕು ಇದಕ್ಕೆ ಯಾವುದೋ ಕಾರಣವನ್ನು ಕೊಡುವುದಿಲ್ಲ ಅಧಿಕಾರಿಗಳು ಕಾರಣವನ್ನು ಹೇಳತಕ್ಕಂಥವರು ತಾವೂ ಕೂಡ ಅಂಥದ್ದೇ ಕಾರಣವನ್ನು ಹೇಳಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಸದಸ್ಯರು ಹೇಳಿದಂಥ ಮಾತನ್ನು ಒಪ್ಪಿದರೂ ಯಾವುದೋ ಕಾರಣವನ್ನು ಕೊಟ್ಟು ತಪ್ಪಿಸಿಕೊಳ್ಳಬೇಕೆ ಇಲ್ಲ ಈಗಾಗಲೇ ಒಂದು ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿದ್ದಾರೆ. ಮೊನ್ನೆ ಪರಿಶೀಲನೆ ಮಾಡಿ ಒಂದು ಕೋಟಿ ರೂಪಾಯಿಗಳನ್ನು ಈ ಸೇತುವೆಗೆ ಖರ್ಚುಮಾಡುವುದಕ್ಕಾಗುವುದಿಲ್ಲ. ನಮ್ಮ ಹತ್ತಿರ ಹಣ ಕೊಡುವುದಕ್ಕೆ ಆಗುವುದಿಲ್ಲ ವೆಂದು ಹೇಳಿ ಇಲ್ಲಿ ಲೋಲೆವಲ್ ಕಾಸವೇ ಮಾಡಿ ಎಂದು ಆದೇಶ ಕೊಟ್ಟಿದ್ದೇನೆ ಎಸ್ಟಿಮೇಟ್ ರೆಡಿಯಾಗಿದೆ ಶೀಘ್ರದಲ್ಲಿಯೇ ಟೆಂಡರ್ ಕರೆದು ಕೆಲಸ ಮಾಡುತ್ತೇವೆಂದು ಹೇಳುತ್ತೇನೆ.